# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್.ಸಿ. 297/2022

| | | |
|---|---|---|
| ಸಾಕ್ಷಿದಾರರ ಹೆಸರು | ಸಿದ್ದಪ್ಪ | ಪ್ರಮಾಣ ವಚನ ಮಾಡಿದ ದಿನಾಂಕ: 08.09.2025 |
| ತಂದೆಯ/ಗಂಡನ ಹೆಸರು | ಪಾಪಯ್ಯ | |
| ವಯಸ್ಸು | 65 ವರ್ಷ | |
| ವೃತ್ತಿ | Social worker | ಪ್ರಾ.ಸಾಃ 02 |
| ವಾಸ ಸ್ಥಳ | ರಮಾಬಾಯಿ ನಗರ, ಮೈಸೂರು | ಚಾ.ಸಾಃ 03 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ನನ್ನ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರಿಗೆ ಅಮಾನತ್ತು ಪಂಚನಾಮೆಯನ್ನು ತೋರಿಸಲಾಯಿತು. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.1 ಎಂದು ಈಗಾಗಲೇ ಗುರುತಿಸಲ್ಪಟ್ಟಿದ್ದು, ಸಾಕ್ಷಿದಾರರ ಸಹಿಯನ್ನು ನಿಪಿ. 1 (ಬಿ ) ಎಂದು ಗುರುತಿಸಲಾಯಿತು. ಈಗ್ಗೆ 5-6 ವರ್ಷಗಳ ಹಿಂದೆ ಪೊಲೀಸರು ರೈಲ್ವೆ ಬಡಾವಣೆಗೆ ಬಂದಿದ್ದರು ಆದರೆ ಯಾವ ಕಾರಣಕ್ಕಾಗಿ ಬಂದಿದ್ದರು ಎಂದು ಗೊತ್ತಿರುವುದಿಲ್ಲ. ಆದರೆ ಸಹಿ ಮಾಡು ಎಂದು ಹೇಳಿದ್ದರು ನಾನು ಸಹಿ ಮಾಡಿದ್ದೆ. ಪೊಲೀಸರು ನನ್ನನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು

ಹೋಗಿರಲಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಇಬ್ಬರು ಆರೋಪಿತರನ್ನು ನಾನು ಈ ಹಿಂದೆ ಎಲ್ಲಿಯೂ ನೋಡಿರುವುದಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಮತ್ತು ನನ್ನ ಹೇಳಿಕೆಯನ್ನು ತೆಗೆದುಕೊಂಡಿರುವುದಿಲ್ಲ.

**ಈ ಹಂತದಲ್ಲಿ , ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ಜನರು ಕಷ್ಟ ಸುಖ ಎಂದು ಬಂದರೆ ನಾನು ಸಹಾಯ ಮಾಡುತ್ತೇನೆ. ದಿನಾಂಕ 17.05.2018 ರಂದು ಮಧ್ಯಾಹ್ನ 3.40 ಸಮಯಕ್ಕೆ ಮೈಸೂರಿನ ಸೌತ್ ಪೊಲೀಸ್ ಠಾಣೆಯ ಪೊಲೀಸರು ನಮ್ಮ ಗ್ರಾಮದ ಮನೆ ನಂಬರ್ 401 ರಲ್ಲಿ ವೇಶ್ಯವಾಟಿಗೆ ನಡೆಯುತ್ತಿದೆ ಎಂದು ಮಾಹಿತಿ ತಿಳಿಸಿದ್ದರು ಎಂದರೆ ಸರಿಯಲ್ಲ. ಅದೇ ಕಾರಣಕ್ಕಾಗಿ ನಾನು ಮತ್ತು ಮುರುಳಿ ರವರ ಮಗ ನಾಗರಾಜು (ಚಾಸಾ-2) ರವರು ಸೇರಿ ರಮಾಭಾಯಿ ನಗರದಲ್ಲಿ ಇರುವ ಮನೆ ನಂಬರ್ 401 ರ ಬಳಿ ಪೊಲೀಸರ ಜೊತೆ ಹೋಗಿದ್ದೆವು ಎಂದರೆ ಸರಿಯಲ್ಲ. ಪೊಲೀಸರು ಮನೆ ಬಾಗಿಲು ತೆಗೆಯುವಂತೆ ಮನೆ ಮಾಲೀಕರಿಗೆ ತಿಳಿಸಿದ್ದರು ಆದರೆ ತೆಗೆಯಲಿಲ್ಲ ಪೊಲೀಸರೇ ಬಾಗಿಲನ್ನು ಜೋರಾಗಿ ತಳ್ಳಿದ್ದರು ಆಗ ಹಾಲ್ ನಲ್ಲಿ ಒಂದು ಹೆಂಗಸು ನಿಂತಿದ್ದು ಅವರ ಬಗ್ಗೆ ವಿಚಾರ ಮಾಡಲಾಗಿ ಮಧು ಕೋಂ ಸುರೇಶ್, ವಾಸ ನಂಜನಗೂಡು ತಾಲ್ಲೂಕು ಎಂದು ತಿಳಿಸಿದ್ದು ಮನೆಯಲ್ಲಿ ಬೇರೆಯವರು ಇರುವ ಬಗ್ಗೆ ಮಾಹಿತಿ ಕೇಳಲಾಗಿ ಮನೆಯಲ್ಲಿ ಯಾರು ಇರುವುದಿಲ್ಲ ಎಂದು ತಿಳಿಸಿದ್ದರು ನಂತರದಲ್ಲಿ ನಾವುಗಳಲ್ಲೆರು ಅದೇ ಮನೆಯಲ್ಲಿ ಪೂರ್ವ ದಿಕ್ಕಿಗೆ ಇದ್ದ ಕೊಠಡಿಯನ್ನು

ಪ್ರವೇಶಿಸಿ ನೋಡಲಾಗಿ ಒಬ್ಬ ಹೆಂಗಸು ಮತ್ತು ಗಂಡಸು ಅರೆ ನಗ್ನರಾಗಿ ನಿಂತಿರುವುದು ಕಂಡು ಬಂದಿತ್ತು. ಅವರನ್ನು ವಿಚಾರಣೆ ಮಾಡಲಾಗಿ ರಂಜಿತಾ ಕೋಂ ದರ್ಶನ್, ಬೆಳವಾಡಿ ಗ್ರಾಮ ಮತ್ತು ಗಂಡಸಿನ ಬಗ್ಗೆ ವಿಚಾರಿಸಲಾಗಿ ಹರೀಶ ಬಿನ್ ಗಣೇಶ್, ಮನೆ ನಂಬರ್ 106 ಕ್ಯಾತಮಾರನಹಳ್ಳಿ ಎಂದು ತಿಳಿಸಿದ್ದು ನಂತರದಲ್ಲಿ ಮನೆಯ ಸ್ನಾನದ ಕೊಠಡಿಯನ್ನು ಪರಿಶೀಲಿಸಲಾಗಿ ಅಲ್ಲಿ 4 ಜನ ಅವಿತು ಕುಳಿತುಕೊಂಡಿದ್ದು ಅವರುಗಳನ್ನು ವಿಚಾರಣೆ ಮಾಡಲಾಗಿ ಮಂಜುಳ ಕೋಂ ರಾಜು,ಮಲಯಾಳ ಜನಾಂಗ, ಮದೀನಾ ಪೇಟೆ ಗ್ರಾಮ, ಕೇರಳ ರಸ್ತೆ ಮಾರ್ಗ, ವಿರಾಜಪೇಟೆ, ಕೊಡಗು ಎಂದು ತಿಳಿಸಿದ್ದರು, ನಂತರ ಗಂಡಸರ ಬಗ್ಗೆ ವಿಚಾರಿಸಲಾಗಿ ರತನ್, ಮೈಸೂರಿನ ರಾಜೇಂದ್ರ ನಗರದ ನಿವಾಸಿ ಎಂದು ತಿಳಿಸಿದ್ದ ಮತ್ತೂರ್ವ ರತನ್ ಕುಮಾರ್, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಎಂದು ತಿಳಿಸಿದ್ದ, ಮತ್ತೊರ್ವ ನಾಗರಾಜು ತಂದೆಯ ಹೆಸರು ಕನ್ನೇಶ, ಕಾರವಾರ ಜಿಲ್ಲೆ ಎಂದು ತಿಳಿಸಿದ್ದ. ಇಲ್ಲಿಗೆ ಬಂದಿದ್ದ ಬಗ್ಗೆ ವಿಚಾರಿಸಲಾಗಿ ಮಧು ಮತ್ತು ಮಂಜುಳ ರವರು ಈ ಮನೆಯನ್ನು ಬಾಡಿಗೆ ಪಡೆದು ಅಕ್ರಮವಾಗಿ ವೇಶ್ಯವಾಟಿಕೆ ನಡೆಸುತ್ತಿದ್ದು ಈ ಸಂಬಂಧ ನಾವು ಇಲ್ಲಿಗೆ ಬಂದಿರುತ್ತೇವೆ ಎಂದು ತಿಳಿಸಿದ್ದರು. ನಂತರ ಕೊಠಡಿಗಳನ್ನು ಪರಿಶೀಲಿಸಲಾಗಿ ಚಾಪೆ ಮತ್ತು ದಿಂಬು ಕೆಳಗಡೆ ವಿವಿಧ ಕಂಪನಿಯ 5 ಕಾಂಡೋಮ್ ಗಳು ಮತ್ತು ವಿವಿಧ ಕಂಪನಿಯ 9 ಮೊಬೈಲ್ ಫೋನ್ ಗಳು ಮತ್ತು ಅಲ್ಲಿ ಸುಮಾರು 20,145/- ರೂಪಾಯಿಗಳು ಸಿಕ್ಕಿದ್ದು ಅವುಗಳನ್ನು ಮುಂದಿನ ಕ್ರಮಕ್ಕಾಗಿ ಡಿ.ವೈ.ಎಸ್.ಪಿ. ರವರು ನಮ್ಮ ಸಮ್ಮುಖದಲ್ಲಿ ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಮತ್ತು ಈ ಬಗ್ಗೆ ಅಮಾನತ್ತು ಮಹಜರ್ ಕ್ರಮ ಜರುಗಿಸಿತ್ತು ಎಂದರೆ ಸರಿಯಲ್ಲ. ನಾನು ನಿಪಿ-1 ರಲ್ಲಿ ಇರುವ ವಿಷಯಗಳನ್ನು ತಿಳಿದುಕೊಂಡು ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನಾನ ಈಗ ನೋಡುತ್ತಿರುವ 2,000/- ರೂ ಮುಖಬೆಲೆಯ 8 ನೋಟುಗಳು ಹಾಗು 500/- ರೂ ಮುಖಬೆಲೆಯ 6 ನೋಟುಗಳು, 200/-ರೂ ಮುಖಬೆಲೆಯ 2 ನೋಟುಗಳು, 100/- ರೂ ಮುಖಬೆಲೆಯ 7 ನೋಟುಗಳು, 20/- ರೂ ಮುಖಬೆಲೆಯ 1 ನೋಟು, 10/- ರೂ ಮುಖಬೆಲೆಯ 2 ನೋಟುಗಳು ಮತ್ತು 5/- ರೂ

ಮುಖಬೆಲೆಯ 1 ನೋಟುಗಳನ್ನು ಈ ಹಿಂದೆ ನೋಡಿರುವುದಿಲ್ಲ. ಅದೇ ರೀತಿ ಮೊಬೈಲ್ ಗಳನ್ನು ಮತ್ತು ಕಾಂಡೋಮ್ ಗಳನ್ನು ಸಹ ನನ್ನ ಸಮಕ್ಷಮ ಅಮಾನತ್ತು ಪಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಈಗ ಓದಿ ಹೇಳಿದ ನಿಪಿ–4 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ನನಗೆ ಪ್ರಕರಣದ ಬಗ್ಗೆ ಎಲ್ಲಾ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದ :**

**ಆರೋಪಿತರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

**ಮರವಿಚಾರಣೆಃ ಇಲ್ಲ**

( ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇ ಎ ಒ

4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.